‘ಯಾವಾಗ ನೋಡಿದ್ರೂ ಅರಿವಿಗಂಟು ಮುಂದಿಟ್ಟುಕೊಂಡು ಕೂಡ್ತಾರೆ. ಸಾಕು ನಿಲ್ಲಿಸ್ರಬೇ. ಸ್ವಲ್ಪ ಮನಿ ಕೆಲಸ ನೋಡಿಕೊಳ್ರಿ... ಅಂತ ಬೈಯೋರಪ್ಪ...’

ಬೆಳಗಾವಿ ಜಿಲ್ಲೆಯ ಗೋಕಾಕ್ ಎಂಬ ಊರಿನ ಬಣಗಾರ ಓಣಿಯಲ್ಲಿ ಒಂದು ನಡುಮಧ್ಯಾಹ್ನ ಎಂಬತ್ತರ ಆಸುಪಾಸಿನ ಹಿರಿಯಜ್ಜಿ ಪ್ರೇಮಾ ಹತಪಾಕಿ ಅವರು, ಬಣ್ಣ ಬಣ್ಣದ ನಯನಾಕರ್ಷಕ ಕೌದಿಗಳನ್ನು ನಮ್ಮೆಲ್ಲರ ಮುಂದೆ ಹರಡಿ ನಗುನಗುತ್ತಾ ಹೇಳಿದಾಗ ನಾವೂ ಜೊತೆಗೂಡಿ ನಕ್ಕೆವು. ಆದರೆ ಆ ನಗುವಿನ ಹಿಂದಿರುವ ವಿಷಾದ ಎಷ್ಟು ಗಾಢವಾದದ್ದು ಎನ್ನುವುದು ನಮಗೆಲ್ಲರಿಗೂ ಗೊತ್ತಿತ್ತು. ಭಾರತದಲ್ಲಿನ ಲಿಂಗತಾರತಮ್ಯ, ಕಲೆಯ ಕುರಿತ ಅಸಡ್ಡೆ, ಗಂಡಾಳ್ವಿಕೆಯ ದರ್ಪ, ಹೆಣ್ಣಿನ ಸಂದಿಗ್ಧ ಬದುಕು – ಎಲ್ಲವೂ ಆ ಮಾತಿನಲ್ಲಿ ಅಡಗಿದ್ದವು. ಕೂಗಳತೆಯ ದೂರದಲ್ಲಿ ಹರಿಯುತ್ತಿದ್ದ ಘಟಪ್ರಭಾ ನದಿಗೂ ಆ ಮಾತಿನ ನೋವು ಗೊತ್ತಿರುವಂತೆ ‘ಭೋ’ ಎನ್ನುತ್ತಿದ್ದಳು. ಕೇವಲ ಹದಿಮೂರು ವರ್ಷದ ಹಿಂದೆ, ಅಂದರೆ 2009ರಲ್ಲಿ, ಸೊಕ್ಕಿ ಆರ್ಭಟಿಸಿದ ಘಟಪ್ರಭೆ ಇಡೀ ಬಣಗಾರ ಓಣಿಯಲ್ಲೆಲ್ಲಾ ನುಗ್ಗಿ ಅಲ್ಲೋಲಕಲ್ಲೋಲ ಮಾಡಿ, ಅವರ ಬಣ್ಣದ ಕೌದಿಗಳನ್ನೆಲ್ಲಾ ತಿಂದು ತೇಗಿ ತುಂಡುತುಂಡಾಗಿ ಕಕ್ಕಿದ್ದಳಾದ್ದರಿಂದ ಸಮಾಧಾನ ಮಾಡುವ ನೈತಿಕ ಧೈರ್ಯವಿಲ್ಲದೆ ಅಸಹಾಯಕತೆಯಿಂದ ನಿಟ್ಟುಸಿರು ಬಿಡುತ್ತಾ ಹರಿಯುತ್ತಿದ್ದಳು.

‘ಕಸದಿಂದ ರಸ’ ಎನ್ನುವುದಕ್ಕೆ ಸೂಕ್ತ ಉದಾಹರಣೆಯಾಗಿ ಈ ಕೌದಿ ಹೊಲಿಯುವ ವಿದ್ಯೆಯನ್ನು ಪರಿಗಣಿಸಬಹುದು. ಭಾರತದ ಬಹಳಷ್ಟು ಕಡೆ ಇದು ಬೇರೆ ಬೇರೆ ಹೆಸರಿನಲ್ಲಿ ಇದ್ದೇ ಇದೆಯಾದರೂ, ಉತ್ತರ ಕರ್ನಾಟಕದಲ್ಲಿ ಇದು ಪ್ರೀತಿಯ ‘ಕೌದಿ’ ಆಗಿದೆ. (ಮಹಾರಾಷ್ಟ್ರದಲ್ಲಿ ‘ಗೋದಾಡಿ’) ಸಂಪೂರ್ಣವಾಗಿ ಹಳೆಯ ಬಟ್ಟೆಯ ತುಂಡುಗಳನ್ನು ಬಳಸಿ ಕಲಾತ್ಮಕವಾಗಿ ಹೊಲಿಯುವ ಈ ‘ಕೌದಿ’ ಎಂಬ ಹೊದಿಕೆ, ಚಳಿಗಾಲದಲ್ಲಿ ಜನರನ್ನು ಬೆಚ್ಚಗೂ, ಬೇಸಿಗೆಯಲ್ಲಿ ತಂಪಾಗಿಯೂ ಇಡುವ ಶಕ್ತಿಯನ್ನು ಹೊಂದಿದೆ. ಸಂಪೂರ್ಣವಾಗಿ ಬಳಸಿ ಬಿಟ್ಟ ಬಟ್ಟೆಗಳಿಂದಲೇ ತಯಾರಾಗುವ ಕೌದಿಗೆ ಹೊಸತಾಗಿ ಸೇರುವುದೇನಿದ್ದರೂ ಆ ತುಂಡುಗಳನ್ನು ಸೇರಿಸುವ ಬಿಳಿಯ ಗಟ್ಟಿದಾರ ಮಾತ್ರವಾಗಿದೆ. ಇದೊಂದು ರೀತಿಯಲ್ಲಿ ‘ಹಳೆ ಹಸಿರು, ಹೊಸ ಬೇರು’ ಕೂಡಿರುವ ಸೊಗಸಾದ ಮರ!

**ತಲೆಮಾರುಗಳಿಂದ ತಲೆಮಾರಿಗೆ ಅಮೃತಕಲೆ**

ಕೌದಿ ಹೊಲಿಯುವ ವಿದ್ಯೆಯೆಂಬುದು ಈ ತಾಯಂದಿರು ತಮ್ಮ ಗಂಡಸರ ವಿರೋಧದ ನಡುವೆಯೂ ಕಾಪಿಟ್ಟುಕೊಂಡು ಬಂದ ಅಮೃತಕಲೆ ಅನ್ನುವುದರಲ್ಲಿ ಎರಡು ಮಾತಿಲ್ಲ. ಈ ವಿದ್ಯೆ ಹೇಗೆ, ಯಾವ ಮೂಲೆಯಿಂದ, ಯಾವ ದೇಶದಿಂದ ಭಾರತಕ್ಕೆ ಬಂದಿತೋ ಅಥವಾ ಇಲ್ಲಿಯೇ ಜೀವ ತಳೆಯಿತೋ ಎಂಬ ವಿಷಯದ

ಬದುಕ್ತದ ಹೊಲಿಗೆ



